**ಸಾಕ್ಷಿಗೆ ದಿನಾಂಕಃ12-12-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**:: ಪಾಟೀ ಸವಾಲು :: ಎದುರುದಾರರ ಪರ ಮಾನ್ಯ A.G.P ರವರಿಂದ::**

ನಾನು ಎಸ್.ಎಸ್.ಎಲ್.ಸಿ ವರೆಗೂ ವಿಧ್ಯಾಭ್ಯಾಸ ಮಾಡಿದ್ದೇನೆ. ನಾನು ಕಲ್ಕುಳಿಯಲ್ಲಿ ವಾಸ ಇದ್ದೇನೆ. 1 ನೇ ಎದುರುದಾರರು ನನ್ನ ಅಣ್ಣ. 1 ನೇ ಎದುರುದಾರರು ನನ್ನ ಅಣ್ಣನಾದ ಧರ್ಮಪ್ಪ ಗೌಡರವರೊಂದಿಗೆ ಶರೀಕಾಗಿ ನಾನು ವಾಸವಿದ್ದ ಮನೆಯನ್ನು ಕೆಡವಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ನನ್ನ ಅಣ್ಣನಾದ ಧರ್ಮಪ್ಪ ಗೌಡರವರ ವಿರುದ್ಧ ಸಹ ಒಂದು ಪ್ರಕರಣವನ್ನು ಎಫ್.ಒ.ಸಿ ನಂ. 13/2015-16 ರಂತೆ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಫ್.ಒ.ಸಿ ನಂ.27/1999-2000 ರಂತೆ ಎದುರುದಾರರು ನನ್ನ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಹಾಜರಾಗಿದ್ದೆ ಎಂದರೆ ಸರಿ. ಸದರಿ ದೂರಿನ ಅನುಸಾರ ನಾನು ಬೆಟ್ಟಗೆರೆ ಗ್ರಾಮದಲ್ಲಿ 3 ಎಕರೆ 16 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದೆ ಎಂದು ಪ್ರಕರಣ ದಾಖಲಿಸಲಾಗಿತ್ತು ಎಂದರೆ ಸರಿ. ಕೊಚ್ಚವಳ್ಳಿ ಗ್ರಾಮದ ಸರ್ವೆ ನಂ.109 ರಲ್ಲಿ 6 ಎಕರೆ 35 ಗುಂಟೆ ಜಮೀನನ್ನು ಒತ್ತುವರಿ ಮಾಡಿ, ಸದರಿ ಜಮೀನಿನಲ್ಲಿ ವಾಸದ ಮನೆ ಮತ್ತು ತೋಟ ಮಾಡಿರುವುದಾಗಿ ಎದುರುದಾರರು ನನ್ನ ವಿರುದ್ಧ ಎಫ್.ಒ.ಸಿ ನಂ.74/2023-24 ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಎದುರುದಾರರು ಕೆಡವಿದ ಮನೆ ಇತ್ತು ಎಂದರೆ ಸರಿ.

*2. ಈಗ ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಆರ್ -1** ಎಂದು ಗುರುತಿಸಲಾಯಿತು.* ಸದರಿ ನಿಶಾನೆ ಆರ್-1 ನಲ್ಲಿ ಕಾಣುವ ಒಂದು ಶೆಡ್ ನ ಮೇಲೆ ಓ.ಎಸ್ ನಂ. 7/2024 ರಲ್ಲಿ ನ್ಯಾಯಾಲಯ ನೀಡಿದಂತಹ ತಾತ್ಕಾಲಿಕ ನಿರ್ಬಂಧಕಾಜ್ಞೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು, ಸದರಿ ಭಾವ ಚಿತ್ರದಲ್ಲಿ ಕೆಡವಿದಂತೆ ಕಾಣುವ ಜಾಗದಲ್ಲಿ ಒಂದು ತೋಟದ ಮನೆ ಇದ್ದು ಮತ್ತು ಆ ತೋಟದ ಮನೆಯ ಮೇಲೆ ಓ.ಎಸ್ ನಂ.7/2024 ರಲ್ಲಿ ನ್ಯಾಯಾಲಯ ನೀಡಿದಂತಹ ತಾತ್ಕಾಲಿಕ ನಿರ್ಬಂಧಕಾಜ್ಞೆ ಚಾಲ್ತಿಯಲ್ಲಿತ್ತು ಎಂದು ನುಡಿಯುತ್ತಾರೆ.

3. *ಸಾಕ್ಷಿಗೆ ಮತ್ತೊಂದು ಭಾವ ಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಭಾವ ಚಿತ್ರವನ್ನು ನೋಡಿ ಒಪ್ಪಿದ್ದು, ಅದನ್ನು* ***ನಿ.ಆರ್ -2*** *ಎಂದು ಗುರುತಿಸಲಾಯಿತು.* ಸದರಿ ಭಾವ ಚಿತ್ರದಲ್ಲಿರುವ ಮನೆ ನಮ್ಮ ವಾಸದ ಮನೆ ಆಗಿರುತ್ತದೆ ಎಂದರೆ ಸರಿ. ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಎದುರುದಾರರು ನ್ಯಾಯಾಲಯದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಯಾವುದೇ ತೋಟದ ಮನೆಯನ್ನು ಕೆಡವಿರುವುದಿಲ್ಲ ಎಂದರೆ ಸರಿಯಲ್ಲ. ಒ.ಎಸ್ ನಂ. 7/2024 ರಲ್ಲಿನ ದಾವಾ ಪತ್ರದಲ್ಲಿ ಎದುರುದಾರರನ್ನು 2 ನೇ ಪ್ರತಿವಾದಿಯಾಗಿ ನೀವು ಪಕ್ಷಕಾರರನ್ನಾಗಿ ಮಾಡಿರುತ್ತೀರಿ ಎಂದರೆ ಸರಿ. ತದನಂತರ ಸದರಿ ದಾವೆಯಲ್ಲಿ ನ್ಯಾಯಾಲಯವು ಎದುರುದಾರರನ್ನು 2 ನೇ ಪ್ರತಿವಾದಿ ಸ್ಥಾನದಿಂದ ಕೈಬಿಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ತಿಳಿದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ತೋಟದ ಮನೆ ಕೂತುಗೋಡು ಗ್ರಾಮ ಪಂಚಾಯಿತಿ ಪರಿಮಿತಿಯೊಳಗೆ ಇದೆ.

<u>ನ್ಯಾಯಾಲಯದ ಪ್ರಶ್ನೆ ಃ</u> ತೋಟದ ಮನೆ ನಿರ್ಮಿಸಲು ಗ್ರಾಮ ಪಂಚಾಯಿತಿಯಿಂದ ಪರವಾನಗಿ ಪಡೆದಿದ್ದೀರಾ?

ಸಾಕ್ಷಿಯ ಉತ್ತರ ಃ ಇಲ್ಲ.

<u>ನ್ಯಾಯಾಲಯದ ಪ್ರಶ್ನೆ ಃ</u> ತೋಟದ ಮನೆಗೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಇತ್ತೇ?

ಸಾಕ್ಷಿಯ ಉತ್ತರ ಃ ಇಲ್ಲ.

**<u>ಃಮರುವಿಚಾರಣೆ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ:

ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಃ

ಶೃಂಗೇರಿ.